ಆದಿಕವಿ ಶ್ರೀ ಮಹರ್ಷಿ ವಾಲ್ಮೀಕಿ ವಿಶ್ವವಿದ್ಯಾನಿಲಯ, ರಾಯಚೂರು

ADIKAVI SRI MAHARSHI VALMIKI UNIVERSITY, RAICHUR

ಆಡಳಿತ ವಿಭಾಗ registrarrur@gmail.com

ಕ್ರ. ಸಂ. ಆಶ್ರೀಮವಿರಾ/ಆಡಳಿತ/2025-26/ 95(a) ದಿನಾಂಕ: 21/4/2026

ವಿಷಯ : ದಿನಾಂಕ 15.04.2026 ರಂದು ಜರುಗಿದ ಸಿಂಡಿಕೇಟ್ ಸಾಮಾನ್ಯ ಸಭೆಯ ನಡಾವಳಿಗಳನ್ನು ಕಳುಹಿಸುವ ಕುರಿತು.

ಮೇಲ್ಕಾಣಿಸಿದ ವಿಷಯಕ್ಕೆ ಸಂಬಂಧಿಸಿದಂತೆ, ದಿನಾಂಕ 15.04.2026 ರಂದು ಜರುಗಿದ ಸಿಂಡಿಕೇಟ್ ಸಾಮಾನ್ಯ ಸಭೆಯ ನಡಾವಳಿಗಳನ್ನು ಈ ಪತ್ರದೊಂದಿಗೆ ಲಗತ್ತಿಸಿ ತಮ್ಮ ಅವಗಾಹನೆಗಾಗಿ ಸಲ್ಲಿಸಲಾಗಿದೆ.

ಕುಲಸಚಿವರು
ಆದಿಕವಿ ಶ್ರೀ ಮಹರ್ಷಿ ವಾಲ್ಮೀಕಿ ವಿಶ್ವವಿದ್ಯಾನಿಲಯ,
ರಾಯಚೂರು

ಕುಲಸಚಿವರು
ಆದಿಕವಿ ಶ್ರೀ ಮಹರ್ಷಿ ವಾಲ್ಮೀಕಿ ವಿಶ್ವವಿದ್ಯಾನಿಲಯ
ರಾಯಚೂರು

ಇವರಿಗೆ :

01. ಮಾನ್ಯ ರಾಜ್ಯಪಾಲರ ಕಾರ್ಯದರ್ಶಿಗಳು, ರಾಜಭವನ, ಬೆಂಗಳೂರು-560001.
02. ಮಾನ್ಯ ಪ್ರಧಾನ ಕಾರ್ಯದರ್ಶಿಗಳು, ಉನ್ನತ ಶಿಕ್ಷಣ ಇಲಾಖೆ(ವಿಶ್ವವಿದ್ಯಾನಿಲಯಗಳು), ಕರ್ನಾಟಕ ಸರ್ಕಾರ, ಬಹುಮಹಡಿ ಕಟ್ಟಡ, ಬೆಂಗಳೂರು-560001.
03. ವಿಶ್ವವಿದ್ಯಾನಿಲಯದ ಎಲ್ಲಾ ಸಿಂಡಿಕೇಟ್ ಸದಸ್ಯರುಗಳಿಗೆ, ಆದಿಕವಿ ಶ್ರೀ ಮಹರ್ಷಿ ವಾಲ್ಮೀಕಿ ವಿಶ್ವವಿದ್ಯಾನಿಲಯ, ರಾಯಚೂರು.
04. ಆಯುಕ್ತರ/ಜಂಟಿ ನಿರ್ದೇಶಕರು ಕಾಲೇಜು ಶಿಕ್ಷಣ ಇಲಾಖೆ, ಕಲಬುರಗಿ.
05. ನಿರ್ದೇಶಕರು, ತಾಂತ್ರಿಕ ಶಿಕ್ಷಣ ಇಲಾಖೆ, ಪ್ಯಾಲೆಸ್ ರಸ್ತೆ, ಬೆಂಗಳೂರು-560001.
06. ನಿರ್ದೇಶಕರು, ವೈದ್ಯಕೀಯ ಕಾಲೇಜು ಶಿಕ್ಷಣ, ಬೆಂಗಳೂರು-560001.
07. ಆಯುಕ್ತರು, ಸಾರ್ವಜನಿಕ ಶಿಕ್ಷಣ ಇಲಾಖೆ, ಬೆಂಗಳೂರು-560001
08. ನಿರ್ದೇಶಕರು, ಪದವಿ ಪೂರ್ವ ಶಿಕ್ಷಣ ಇಲಾಖೆ, ಬೆಂಗಳೂರು -560001
09. ಕುಲಸಚಿವರು(ಮೌಲ್ಯಮಾಪನ), ಆದಿಕವಿ ಶ್ರೀ ಮಹರ್ಷಿ ವಾಲ್ಮೀಕಿ ವಿಶ್ವವಿದ್ಯಾನಿಲಯ, ರಾಯಚೂರು.
10. ಹಣಕಾಸು ಅಧಿಕಾರಿಗಳು, ಆದಿಕವಿ ಶ್ರೀ ಮಹರ್ಷಿ ವಾಲ್ಮೀಕಿ ವಿಶ್ವವಿದ್ಯಾನಿಲಯ, ರಾಯಚೂರು.
11. ಮುಖ್ಯಸ್ಥರು/ಸಂಯೋಜಕರು ಎಲ್ಲಾ ಅಧ್ಯಯನ ವಿಭಾಗಗಳು, ಆದಿಕವಿ ಶ್ರೀ ಮಹರ್ಷಿ ವಾಲ್ಮೀಕಿ ವಿಶ್ವವಿದ್ಯಾನಿಲಯ ರಾಯಚೂರು.
12. ವಿದ್ಯಾರ್ಥಿ ಕಲ್ಯಾಣ ಅಧಿಕಾರಿಗಳು, ಆದಿಕವಿ ಶ್ರೀ ಮಹರ್ಷಿ ವಾಲ್ಮೀಕಿ ವಿಶ್ವವಿದ್ಯಾನಿಲಯ, ರಾಯಚೂರು.
13. ಉಪ ಕುಲಸಚಿವರು, ಆದಿಕವಿ ಶ್ರೀ ಮಹರ್ಷಿ ವಾಲ್ಮೀಕಿ ವಿಶ್ವವಿದ್ಯಾನಿಲಯ, ರಾಯಚೂರು.
14. ನಿರ್ದೇಶಕರು, ಕಾ.ಅ.ಮಂ., ಆದಿಕವಿ ಶ್ರೀ ಮಹರ್ಷಿ ವಾಲ್ಮೀಕಿ ವಿಶ್ವವಿದ್ಯಾನಿಲಯ, ರಾಯಚೂರು.
15. ಗ್ರಂಥಪಾಲಕರು, ಆದಿಕವಿ ಶ್ರೀ ಮಹರ್ಷಿ ವಾಲ್ಮೀಕಿ ವಿಶ್ವವಿದ್ಯಾನಿಲಯ, ರಾಯಚೂರು.
16. ಸಹಾಯಕ ಕಾರ್ಯನಿರ್ವಾಹಕ ಅಭಿಯಂತರರು, ಆದಿಕವಿ ಶ್ರೀ ಮಹರ್ಷಿ ವಾಲ್ಮೀಕಿ ವಿಶ್ವವಿದ್ಯಾನಿಲಯ, ರಾಯಚೂರು.
17. ಸಂಯೋಜಕರು, ಕ್ರೀಡಾ ವಿಭಾಗ, ಆದಿಕವಿ ಶ್ರೀ ಮಹರ್ಷಿ ವಾಲ್ಮೀಕಿ ವಿಶ್ವವಿದ್ಯಾನಿಲಯ, ರಾಯಚೂರು.
18. ಕುಲಪತಿಗಳ ಆಪ್ತ ಕಾರ್ಯದರ್ಶಿ/ಕುಲಸಚಿವರ ಆಪ್ತ ಸಹಾಯಕ, ಆದಿಕವಿ ಶ್ರೀ ಮಹರ್ಷಿ ವಾಲ್ಮೀಕಿ ವಿಶ್ವವಿದ್ಯಾನಿಲಯ, ರಾಯಚೂರು.
19. ಕಛೇರಿ ಪ್ರತಿ.

ಆದಿಕವಿ ಶ್ರೀ ಮಹರ್ಷಿ ವಾಲ್ಮೀಕಿ ವಿಶ್ವವಿದ್ಯಾನಿಲಯ, ರಾಯಚೂರು
ADIKAVI SRI MAHARSHI VALMIKI UNIVERSITY, RAICHUR
ಮಂತ್ರಾಲಯ ರಸ್ತೆ, ರಾಯಚೂರು
ಆಡಳಿತ ವಿಭಾಗ

**ದಿನಾಂಕ 15.04.2026 ರಂದು ಬುಧವಾರ ಬೆಳಗ್ಗೆ 11:00 ಗಂಟೆಗೆ ಆದಿಕವಿ ಶ್ರೀ ಮಹರ್ಷಿ ವಾಲ್ಮೀಕಿ ವಿಶ್ವವಿದ್ಯಾನಿಲಯದ ಆಡಳಿತ ಕಛೇರಿಯಲ್ಲಿರುವ ಸಿಂಡಿಕೇಟ್ ಸಭಾಂಗಣ ದಲ್ಲಿ ಜರುಗಿದ ಸಿಂಡಿಕೇಟ್ ಸಾಮಾನ್ಯ ಸಭೆಯ ನಡವಳಿಗಳು.**

**ಸಭೆಯಲ್ಲಿ ಉಪಸ್ಥಿತರಿದ್ದ ಸದಸ್ಯರು**

1) ಡಾ. ಶಿವಾನಂದ ಕೆಳಗಿನಮನಿ, ಗೌರವಾನ್ವಿತ ಕುಲಪತಿಗಳು – ಅಧ್ಯಕ್ಷರು
2) ಡಾ. ಲತಾ ಎಂ.ಎಸ್., ಡೀನರು: ಕಲಾ ನಿಕಾಯ – ಸದಸ್ಯರು
3) ಡಾ. ನಾಗರತ್ನ ಎಂ. ನಾಯ್ಕ್ – ಸದಸ್ಯರು
4) ಶ್ರೀ ಶ್ರೇಯಾಂಕ್ ಹೆಚ್. ವಿ. – ಸದಸ್ಯರು (ಆನ್‌ಲೈನ್)
5) ಡಾ. ಮೀನಾಕ್ಷಿ ಖಂಡಿಮಠ – ಸದಸ್ಯರು
6) ಶ್ರೀ ಡಿ.ಆರ್. ಚೆನ್ನ – ಸದಸ್ಯರು
7) ಶ್ರೀ ಜೀಶಾನ್ ಅಖಿಲ್ ಸಿದ್ದಿಖಿ – ಸದಸ್ಯರು
8) ಶ್ರೀ ಶಿವಣ್ಣ ವಕೀಲರು – ಸದಸ್ಯರು
9) ಶ್ರೀ ಚನ್ನಬಸವ ತಂದೆ ಬಸವರಾಜಪ್ಪ – ಸದಸ್ಯರು
10) ಶ್ರೀ ಚಂದ್ರಶೇಖರ ಲಿಂಗದಳ್ಳಿ – ಸದಸ್ಯರು
11) ಪ್ರೊ. ಪಾರ್ವತಿ ಸಿ.ಎಸ್., ಡೀನರು: ಶಿಕ್ಷಣ ನಿಕಾಯ (ಪ್ರಭಾರ) – ಸದಸ್ಯರು
12) ಶ್ರೀಮತಿ ಗಾಯತ್ರಿ ಹಣಕಾಸು ಅಧಿಕಾರಿಗಳು – ವಿಶೇಷ ಆಹ್ವಾನಿತರು
13) ಪ್ರೊ. ಜ್ಯೋತಿ ದಮ್ಮ ಪ್ರಕಾಶ್, ಕುಲಸಚಿವರು (ಮೌಲ್ಯಮಾಪನ) – ಸದಸ್ಯರು
14) ಡಾ. ಚನ್ನಪ್ಪ ಎ., ಕೆ.ಎ.ಎಸ್. (ಸೀನಿಯರ್ ಸೂಪರ್ ಟೈಂ ಸ್ಕೇಲ್) – ಸದಸ್ಯ ಕಾರ್ಯದರ್ಶಿಗಳು

ಕುಲಪತಿಗಳು ಹಾಜರಿದ್ದ ಎಲ್ಲಾ ಸಿಂಡಿಕೇಟ್ ಸದಸ್ಯರನ್ನು ಸ್ವಾಗತಿಸುತ್ತಾ ಸಭೆಯನ್ನು ನಡೆಸಲು ಕುಲಸಚಿವರಿಗೆ ವಹಿಸಿದರು. ಮಾನ್ಯ ಕುಲಪತಿಗಳಿಂದ ಜೇಷ್ಠತೆ ಆಧಾರದ ಮೇಲೆ ನಾಮನಿರ್ದೇಶಿತ ಸಿಂಡಿಕೇಟ್ ಸದಸ್ಯರಾಗಿ ಹೊಸದಾಗಿ ನೇಮಕಗೊಂಡ ಡಾ. ಲತಾ ಎಂ.ಎಸ್., ಡೀನರು, ಕಲಾ ನಿಕಾಯ, ಇವರನ್ನು ಕುಲಸಚಿವರು ಸಭೆಗೆ ಪರಿಚಯಿಸುತ್ತಾ ಸ್ವಾಗತಿಸಿದರು. ಮುಂದುವರೆದು, ಸಭೆಯಲ್ಲಿ ಹಾಜರಿದ್ದ ಸದಸ್ಯರ ಕೋರಂ ಖಚಿತಪಡಿಸಿಕೊಳ್ಳುವ ಮೂಲಕ ಕಾರ್ಯಸೂಚಿಯ ಪ್ರಕಾರ ಸಭೆಯ ಮುಂದೆ ವಿಷಯಗಳನ್ನು ಮಂಡಿಸಿದರು.

**ವಿಷಯ ಕ್ರಮಾಂಕ (1)**

ದಿನಾಂಕ 07.01.2026ರಂದು ನಡೆದ ಸಿಂಡಿಕೇಟ್ ಸಾಮಾನ್ಯ ಸಭೆಯ ಅನುಪಾಲನಾ ವರದಿ ಕುರಿತು.

ಚರ್ಚೆ:

ದಿನಾಂಕ 07.01.2026ರಂದು ನಡೆದ ಸಿಂಡಿಕೇಟ್ ಸಾಮಾನ್ಯ ಸಭೆಯ ಅನುಪಾಲನಾ ವರದಿ ಮಂಡಿಸುವ ಸಂದರ್ಭದಲ್ಲಿ ಸಿಂಡಿಕೇಟ್ ಸದಸ್ಯರಾದ ಶ್ರೀ ಜೀಶಾನ್ ಅಖಿಲ್ ಸಿದ್ದಿಖಿ ಇವರು ವಿಶ್ವವಿದ್ಯಾನಿಲಯದ ಸಿಂಡಿಕೇಟ್ ಸಭೆಯ ಲೈವ್ ಟೆಲಿಕಾಸ್ಟ್ ಕುರಿತು ಅಭಿಪ್ರಾಯ ವ್ಯಕ್ತಪಡಿಸಿದರು. ಇದಕ್ಕೆ ಸಂಬಂಧಿಸಿದಂತೆ ಕುಲಸಚಿವರು ವಿಶ್ವವಿದ್ಯಾನಿಲಯದಲ್ಲಿ ಪ್ರಸ್ತುತ ತಾಂತ್ರಿಕ ಸಿಬ್ಬಂದಿಗಳ ಕೊರತೆ ಇದ್ದು ಹಾಗೂ ವಿಶ್ವವಿದ್ಯಾನಿಲಯವು ಗ್ರಾಮಾಂತರ ಪ್ರದೇಶದಲ್ಲಿರುವುದರಿಂದ ಅಂತರ್ಜಾಲ ವ್ಯವಸ್ಥೆಯು ಸಮರ್ಪಕವಾಗಿರುವುದಿಲ್ಲ. ಈ ಎಲ್ಲಾ ತಾಂತ್ರಿಕ ಸಮಸ್ಯೆಗಳನ್ನು

ಮುಂದಿನ ದಿನಗಳಲ್ಲಿ ಸರಿಪಡಿಸಿದ ನಂತರ ಲೈವ್ ಟೆಲಿಕಾಸ್ಟ್ ಮಾಡಲು ಕ್ರಮವಹಿಸಲಾಗುವುದು ಎಂದು ಸಭೆಗೆ ತಿಳಿಸಿದರು. ಇದಕ್ಕೆ ಕುಲಪತಿಗಳು ಸಹಮತಿಸಿದರು.

ಸಿಂಡಿಕೇಟ್ ಸದಸ್ಯರಾದ ಡಾ. ಮೀನಾಕ್ಷಿ ಖಂಡಿಮಠ ಇವರು ಸ್ನಾತಕ ಮತ್ತು ಸ್ನಾತಕೋತ್ತರ ಕೋರ್ಸುಗಳ ಶುಲ್ಕ ರಚನಾ ಸಮಿತಿಯ ಜೊತೆ ಸ್ನಾತಕೋತ್ತರ ಪದವಿ ಕೇಂದ್ರಗಳ ಪ್ರಾಂಶುಪಾಲರ ಸಭೆಯನ್ನು ಜರುಗಿಸಲು ಈಗಾಗಲೇ ಸುತ್ತೋಲೆಯನ್ನು ಹೊರಡಿಸಲಾಗಿದ್ದು ಸಭೆಯನ್ನು ಮುಂದೂಡಲಾಗಿರುತ್ತದೆ. ಸದರಿ ಸಭೆಯನ್ನು ಮತ್ತೊಮ್ಮೆ ನಡೆಸಬೇಕೆಂದು ಸಭೆಗೆ ಕೋರಿದರು ಇದಕ್ಕೆ ಉತ್ತರವಾಗಿ ಕುಲಸಚಿವರು ಮಾನ್ಯ ಕುಲಪತಿಗಳ ಅನುಮೋದನೆಯೊಂದಿಗೆ ದಿನಾಂಕ 04.05.2026 ರಂದು ಸಭೆಯನ್ನು ಜರುಗಿಸಲು ಕ್ರಮವಹಿಸಲಾಗುವುದು ಎಂದು ತಿಳಿಸಿದರು.

ವಿಶ್ವವಿದ್ಯಾನಿಲಯದ ಹಣಕಾಸು ಅಧಿಕಾರಿಗಳು ವಿಷಯ ಕ್ರ.ಸಂ. 04ಕ್ಕೆ ಸಂಬಂಧಿಸಿದಂತೆ ಕೈಗೊಂಡ ಕ್ರಮದಲ್ಲಿ ಓಪಿಎಸ್ ಜೊತೆ ಎನ್‌ಪಿಎಸ್ ಸಿಬ್ಬಂದಿಗಳನ್ನು ಸೇರಿಸಿ ತಿದ್ದುಪಡಿ ಮಾಡಿ ಕ್ರಮವಹಿಸಲು ಕೋರಿದರು. ಇದಕ್ಕೆ ಸಭೆಯು ಅನುಮೋದನೆಯನ್ನು ನೀಡಿತು.

ವಿಷಯ ಕ್ರ.ಸಂ. 10 ಉಪ ಕ್ರಮಾಂಕ 08 ಕ್ಕೆ ಸಂಬಂಧಿಸಿದಂತೆ ಶ್ರೀ ಚಂದ್ರಶೇಖರ ಲಿಂಗದಳ್ಳಿ ಇವರ ಅಧ್ಯಕ್ಷತೆಯಲ್ಲಿ ಶ್ರೀ ಶ್ರೇಯಾಂಕ್ ಹೆಚ್. ವ್ಹಿ. ಹಾಗೂ ಶ್ರೀ ಶಿವಣ್ಣ ವಕೀಲರು ಇವರನ್ನೊಳಗೊಂಡ ಸಿಂಡಿಕೇಟ್ ಉಪಸಮಿತಿ ಹಾಗೂ ವಿಷಯ ಕ್ರ.ಸಂ. 10 ಉಪ ಕ್ರಮಾಂಕ 10ಕ್ಕೆ ಸಂಬಂಧಿಸಿದಂತೆ ಶ್ರೀ ಜೀಶಾನ್ ಅಖಿಲ್ ಸಿದ್ದಿಖಿ ಇವರ ಅಧ್ಯಕ್ಷತೆಯಲ್ಲಿ ಶ್ರೀ ಡಿ.ಆರ್. ಚಿನ್ನ ಹಾಗೂ ಶ್ರೀ ಶಿವಣ್ಣ ವಕೀಲರು ಇವರನ್ನೊಳಗೊಂಡ ಸಿಂಡಿಕೇಟ್ ಉಪಸಮಿತಿಗಳ ಸಭೆಯನ್ನು ಜರುಗಿಸಲು ದಿನಾಂಕವನ್ನು ನಿಗದಿಪಡಿಸಲು ಸದಸ್ಯರು ಕೋರಿದರು. ಇದಕ್ಕೆ ಉತ್ತರವಾಗಿ ಕುಲಸಚಿವರು ಮಾನ್ಯ ಕುಲಪತಿಯವರ ಸಹಮತಿಯೊಂದಿಗೆ ಸದರಿ ಸಭೆಗಳನ್ನು ದಿನಾಂಕ 18.04.2026 ರಂದು ಜರುಗಿಸಬಹುದು ಎಂದು ತಿಳಿಸಿದರು. ಇದಕ್ಕೆ ಉಪಸಮಿತಿಯ ಅಧ್ಯಕ್ಷರು ಹಾಗೂ ಸದಸ್ಯರು ಒಪ್ಪಿಗೆಯನ್ನು ಸೂಚಿಸಿದರು.

**ವಿಷಯ ಕ್ರಮಾಂಕ (2)**

ದಿನಾಂಕ 23.01.2026ರಂದು ನಡೆದ ಸಿಂಡಿಕೇಟ್ ವಿಶೇಷ ಸಭೆಯ ಅನುಪಾಲನಾ ವರದಿ ಕುರಿತು.

ದಿನಾಂಕ 23.01.2026 ರಂದು ಜರುಗಿದ ಸಿಂಡಿಕೇಟ್ ವಿಶೇಷ ಸಭೆಯ ಅನುಪಾಲನಾ ವರದಿಯನ್ನು ಕುಲಸಚಿವರು ಮಂಡಿಸಿದರು.

**ನಿರ್ಣಯ: ಅನುಮೋದಿಸಲಾಯಿತು**

**ವಿಷಯ ಕ್ರಮಾಂಕ (3)**

ದಿನಾಂಕ 24.02.2026ರಂದು ನಡೆದ ಸಿಂಡಿಕೇಟ್ ಸಾಮಾನ್ಯ ಸಭೆಯ ನಡವಳಿಗಳನ್ನು ದೃಢೀಕರಿಸುವ ಕುರಿತು.

**ಚರ್ಚೆ:**

ವಿಷಯ ಕ್ರಮಾಂಕ 04ಕ್ಕೆ ಸಂಬಂಧಿಸಿದಂತೆ, ಸಿಂಡಿಕೇಟ್ ಸದಸ್ಯರುಗಳಾದ ಶ್ರೀ ಡಿ.ಆರ್. ಚಿನ್ನ ಇವರು ವಿಶ್ವವಿದ್ಯಾನಿಲಯದ ಹಣಕಾಸು ಸಮಿತಿಯಲ್ಲಿ ಸಿಂಡಿಕೇಟ್‌ನಿಂದ ನಾಮನಿರ್ದೇಶಿತರಾದ ಒಬ್ಬ ಸದಸ್ಯರನ್ನು ನೇಮಕ ಮಾಡಬೇಕಾಗಿರುತ್ತದೆ. ಆದರೆ ಈಗಾಗಲೇ 2025-26ನೇ ಸಾಲಿನಲ್ಲಿ ಸಿಂಡಿಕೇಟ್ ಸದಸ್ಯರಾದ ಡಾ. ನಾಗರತ್ನ ಎಂ. ನಾಯ್ಕ್ ಇವರನ್ನು ನೇಮಕ ಮಾಡಲಾಗಿದ್ದು ಸದರಿ ಸಾಲಿನಲ್ಲಿ ಬೇರೆ ಒಬ್ಬ ಸದಸ್ಯರನ್ನು ಸಿಂಡಿಕೇಟ್‌ನಿಂದ

ನಾಮನಿರ್ದೇಶನ ಮಾಡುವಂತೆ ಕೋರಿದರು. ಇದಕ್ಕೆ ಉತ್ತರವಾಗಿ ಮಾನ್ಯ ಕುಲಸಚಿವರು ಸಿಂಡಿಕೇಟ್ ಸಮಿತಿಯ ಮುಂದೆ ಹಾಲಿ ಸದಸ್ಯರಲ್ಲಿ ಒಬ್ಬರನ್ನು ಆಯ್ಕೆ ಮಾಡುವಂತೆ ತಿಳಿಸಿದರು.

**ನಿರ್ಣಯ:**

ಸಮಿತಿಯು ಸರ್ವಾನುಮತದಿಂದ ಶ್ರೀ ಡಿ.ಆರ್. ಚಿನ್ನ ಇವರನ್ನು ಮುಂದಿನ ಒಂದು ವರ್ಷದ ಅವಧಿಗೆ ವಿಶ್ವವಿದ್ಯಾನಿಲಯದ ಹಣಕಾಸು ಸಮಿತಿಗೆ ಸಿಂಡಿಕೇಟ್‌ನಿಂದ ನಾಮನಿರ್ದೇಶನ ಮಾಡುವಂತೆ ಸಭೆಯು ಸರ್ವಾನುಮತದಿಂದ ಒಪ್ಪಿಗೆ ಸೂಚಿಸಿತು. ಮುಂದುವರೆದು ಮೇಲಿನ ತಿದ್ದುಪಡಿಯೊಂದಿಗೆ ವಿಷಯ ಕ್ರಮಾಂಕ 01 ರಿಂದ 06 ರವರೆಗಿನ ಹಾಗೂ ಉಪಕ್ರಮಾಂಕ 01 ರಿಂದ 04 ರವರೆಗಿನ ವಿಷಯಗಳನ್ನು ಸಭೆಯು ಸರ್ವಾನುಮತದಿಂದ ಅನುಮೋದಿಸಿತು.

**ವಿಷಯ ಕ್ರಮಾಂಕ (4)**

ಘಟಿಕೋತ್ಸವ ನಡೆಸುವ ಕುರಿತು.

**ಚರ್ಚೆ:**

ಕುಲಸಚಿವರು (ಮೌಲ್ಯಮಾಪನ), ಆದಿಕವಿ ಶ್ರೀ ಮಹರ್ಷಿ ವಾಲ್ಮೀಕಿ ವಿಶ್ವವಿದ್ಯಾನಿಲಯದಲ್ಲಿ ಜರುಗುವ ಪ್ರಥಮ ಘಟಿಕೋತ್ಸವಕ್ಕೆ ಸಂಬಂಧಿಸಿದಿಂತೆ ವಿವರವನ್ನು ಸಭೆಗೆ ತಿಳಿಸುತ್ತಾ ಘಟಿಕೋತ್ಸವದ ಅಧ್ಯಕ್ಷತೆಯನ್ನು ಘನತೆವೆತ್ತ ರಾಜ್ಯಪಾಲರು ವಹಿಸಿಕೊಂಡಿರುತ್ತಾರೆ. ಸದರಿ ಸಮಾರಂಭಕ್ಕೆ ಮುಖ್ಯ ಅತಿಥಿಗಳಾಗಿ ಓರ್ವ ಗೌರವಾನ್ವಿತ ಗಣ್ಯರನ್ನು ಆಹ್ವಾನಿಸಬೇಕಾಗುತ್ತದೆ ಎಂದು ಸಭೆಗೆ ತಿಳಿಸಿದರು. ಇದಕ್ಕೆ ಸಂಬಂಧಿಸಿದಂತೆ ಮಾನ್ಯ ಕುಲಪತಿಗಳು, ಮೂಲತಃ ರಾಯಚೂರು ಜಿಲ್ಲೆಯವರಾದ ಸರ್ವೋಚ್ಚ ನ್ಯಾಯಾಲಯದ ನಿವೃತ್ತ ನ್ಯಾಯಾಧೀಶರಾದ ನ್ಯಾಯಮೂರ್ತಿ ಶಿವರಾಜ ವಿ. ಪಾಟೀಲ ಹೆಸರನ್ನು ಸಭೆಗೆ ತಿಳಿಸಿದರು.

**ನಿರ್ಣಯ:**

**ಸಭೆಯು ಸರ್ವಾನುಮತದಿಂದ ಮಾನ್ಯ ಕುಲಪತಿಗಳು ಸೂಚಿಸಿರುವ ಸರ್ವೋಚ್ಚ ನ್ಯಾಯಾಲಯದ ನಿವೃತ್ತ ನ್ಯಾಯಾಧೀಶರಾದ ನ್ಯಾಯಮೂರ್ತಿ ಶಿವರಾಜ ವಿ. ಪಾಟೀಲ ಇವರನ್ನು ವಿಶ್ವವಿದ್ಯಾನಿಲಯದ ಪ್ರಥಮ ಘಟಿಕೋತ್ಸವ ಸಮಾರಂಭಕ್ಕೆ ಮುಖ್ಯ ಅತಿಥಿಗಳನ್ನಾಗಿ ಆಹ್ವಾನಿಸಲು ಸಭೆಯು ಸಹಮತಿಸಿತು.**

**ಚರ್ಚೆ:**

ಕುಲಸಚಿವರು (ಮೌಲ್ಯಮಾಪನ), ಆದಿಕವಿ ಶ್ರೀ ಮಹರ್ಷಿ ವಾಲ್ಮೀಕಿ ವಿಶ್ವವಿದ್ಯಾನಿಲಯದಲ್ಲಿ ಜರುಗುವ ಪ್ರಥಮ ಘಟಿಕೋತ್ಸವಕ್ಕೆ ಸಂಬಂಧಿಸಿದಂತೆ ಘಟಿಕೋತ್ಸವದಲ್ಲಿ ವಿವಿಧ ಕ್ಷೇತ್ರಗಳಲ್ಲಿ ಗಣನೀಯ ಸಾಧನೆಗೈದ ಸಾಧಕರಿಗೆ ವಿಶ್ವವಿದ್ಯಾನಿಲಯದ ಪರವಾಗಿ ಗೌರವ ಡಾಕ್ಟರೇಟ್ ನೀಡಲಾಗುತ್ತದೆ. ಇದಕ್ಕೆ ಸಂಬಂಧಿಸಿದಂತೆ, ಘನತೆವೆತ್ತ ರಾಜ್ಯಪಾಲರ ನಿರ್ದೇಶನ ಹೀಗಿರುತ್ತದೆ. ಗೌರವ ಡಾಕ್ಟರೇಟ್‌ಗೆ ಸಂಬಂದಿಸಿದಂತೆ, 03 ಜನರನ್ನು ಒಳಗೊಂಡ ಸದಸ್ಯರ ಒಂದು ಶೋಧನಾ ಸಮಿತಿಯನ್ನು ರಚಿಸಬೇಕಾಗುತ್ತದೆ. ಸದರಿ ಶೋಧನಾ ಸಮಿತಿಯಲ್ಲಿ ಘನತೆವೆತ್ತ ರಾಜ್ಯಪಾಲರ ನಾಮನಿರ್ದೇಶನದ ಇಬ್ಬರು ಸದಸ್ಯರು ಹಾಗೂ ಸಿಂಡಿಕೇಟ್‌ನಿಂದ ನಾಮನಿರ್ದೇಶನಗೊಂಡ ಓರ್ವ ಸದಸ್ಯರು ಇರಬೇಕಾಗಿದ್ದು ಒಬ್ಬ ಸದಸ್ಯರ ನಾಮನಿರ್ದೇಶನಕ್ಕೆ ಸಂಬಂಧಿಸಿದಂತೆ ಹೆಸರು ಸೂಚಿಸಲು ಸಭೆಗೆ

ತಿಳಿಸಿದರು. ಇದಕ್ಕೆ ಸಂಬಂಧಿಸಿದಿಂತೆ ಯಾವ ಮಾನದಂಡಗಳನ್ನು ಪರಿಗಣಿಸಿ ನಾಮನಿರ್ದೇಶನ ಮಾಡಬೇಕು ಎಂದು ಸದಸ್ಯರು ಸಭೆಗೆ ಕೇಳಿದರು ವಿಶ್ರಾಂತ ಹಾಗೂ ಪ್ರಸ್ತುತ ಕುಲಪತಿಗಳ ಹೆಸರನ್ನು ಸೂಚಿಸುವುದು ವಾಡಿಕೆಯಾಗಿರುತ್ತದೆ ಎಂದು ಕುಲಸಚಿವರು (ಮೌಲ್ಯಮಾಪನ) ಇವರು ಸಭೆಗೆ ತಿಳಿಸಿದರು. ಇದಕ್ಕೆ ಸಂಬಂಧಿಸಿದಂತೆ ಮಾನ್ಯ ಕುಲಪತಿಗಳು ಪ್ರೊ. ಜೋಗನ್ ಶಂಕರ್, ವಿಶ್ರಾಂತ ಕುಲಪತಿಗಳು, ಕುವೆಂಪು ವಿಶ್ವವಿದ್ಯಾಲಯ, ಶಿವಮೊಗ್ಗ ಇವರ ಹೆಸರನ್ನು ಸೂಚಿಸಿದರು. ಮುಂದುವರೆದು ಸದಸ್ಯರು ಚರ್ಚಿಸುತ್ತಾ ಇನ್ನೂ ಮುಂತಾದ ಹೆಸರುಗಳನ್ನು ಸಭೆಗೆ ಸೂಚಿಸಿದರು ಪ್ರೊ. ಎಸ್.ಆರ್. ನಿರಂಜನ್, ಉಪಾಧ್ಯಕ್ಷರು, ಕರ್ನಾಟಕ ರಾಜ್ಯ ಉನ್ನತ ಶಿಕ್ಷಣ ಪರಿಷತ್ ಬೆಂಗಳೂರು, ಪ್ರೊ. ಎ.ಎಂ.ಖಾನ್, ಕುಲಪತಿಗಳು, ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ, ಪ್ರೊ. ಶಶಿಕಾಂತ ಎಸ್ ಉಡಿಕೇರಿ, ಕುಲಪತಿಗಳು, ಗುಲಬರ್ಗಾ ವಿಶ್ವವಿದ್ಯಾಲಯ, ಕಲಬುರಗಿ, ಪ್ರೊ. ಬಿ.ಕೆ. ರವಿ ಕುಲಪತಿಗಳು, ಬೆಂಗಳೂರು ಉತ್ತರ ವಿಶ್ವವಿದ್ಯಾಲಯ, ಬೆಂಗಳೂರು ಇವರ ಹೆಸರುಗಳನ್ನು ಸಭೆಗೆ ಸೂಚಿಸಿದರು.

**ನಿರ್ಣಯ: ಸಭೆಯು ಮಾನ್ಯ ಕುಲಪತಿಗಳ ವಿವೇಚಾನಾಧಿಕಾರದ ಅನುಸಾರ ಕ್ರಮ ವಹಿಸಲು ಅನುಮೋದನೆಯನ್ನು ನೀಡಿತು.**

**ವಿಷಯ ಕ್ರಮಾಂಕ (5)**

ಶೈಕ್ಷಣಿಕ ವಿಭಾಗದ ಬೋಧನಾ ಕೊಠಡಿಗಳಿಗೆ ಸುಣ್ಣ-ಬಣ್ಣ ನವೀಕರಣ ಕಾಮಗಾರಿ ಕೈಗೊಳ್ಳುವ ಕುರಿತು.

**ನಿರ್ಣಯ:**

ವಿಶ್ವವಿದ್ಯಾನಿಲಯದ ಮುಂದಿನ ಹಣಕಾಸು ಸಮಿತಿಯ ಸಭೆಯಲ್ಲಿ 2026-27ನೇ ಸಾಲಿನಯ ಆಯ-ವ್ಯಯ ಅನುಮೋದನೆ ಪಡೆದ ನಂತರ ಕ್ರಮವಹಿಸಲು ತಿರ್ಮಾನಿಸಲಾಯಿತು.

**ವಿಷಯ ಕ್ರಮಾಂಕ (6)**

ಅಧ್ಯಕ್ಷರ ಅನುಮತಿಯ ಮೇರೆಗೆ ಇತರ ವಿಷಯಗಳ ಚರ್ಚೆ.

ಉಪ-ಕ್ರಮಾಂಕ (01)

ಆದಿಕವಿ ಶ್ರೀ ಮಹರ್ಷಿ ವಾಲ್ಮೀಕಿ ವಿಶ್ವವಿದ್ಯಾನಿಲಯದ ವಿವಿಧ ಅಧ್ಯಯನ ವಿಭಾಗಗಳಿಗೆ ವಿದ್ಯುನ್ಮಾನ ಉಪಕರಣಗಳ ಖರೀದಿಗಾಗಿ ಅಲ್ಪಾವಧಿ ಟೆಂಡರ್ ಆಹ್ವಾನಿಸುವ ಕುರಿತು

**ನಿರ್ಣಯ:**

ವಿಶ್ವವಿದ್ಯಾನಿಲಯದ ಮುಂದಿನ ಹಣಕಾಸು ಸಮಿತಿಯ ಸಭೆಯಲ್ಲಿ 2026-27ನೇ ಸಾಲಿನಯ ಆಯ-ವ್ಯಯ ಅನುಮೋದನೆ ಪಡೆದ ನಂತರ ಕ್ರಮವಹಿಸಲು ತೀರ್ಮಾನಿಸಲಾಯಿತು.

**ಉಪ-ಕ್ರಮಾಂಕ (02)**

ಆದಿಕವಿ ಶ್ರೀ ಮಹರ್ಷಿ ವಾಲ್ಮೀಕಿ ವಿಶ್ವವಿದ್ಯಾನಿಲಯದ ಭೌತಶಾಸ್ತ್ರ ಅಧ್ಯಯನ ವಿಭಾಗಕ್ಕೆ ವಿದ್ಯುನ್ಮಾನ ಉಪಕರಣಗಳ ಖರೀದಿಗಾಗಿ ಅಲ್ಪಾವಧಿ ಟೆಂಡರ್ ಆಹ್ವಾನಿಸುವ ಕುರಿತು.

**ನಿರ್ಣಯ:**

ವಿಶ್ವವಿದ್ಯಾನಿಲಯದ ಮುಂದಿನ ಹಣಕಾಸು ಸಮಿತಿಯ ಸಭೆಯಲ್ಲಿ 2026-27ನೇ ಸಾಲಿನಯ ಆಯ-ವ್ಯಯ ಅನುಮೋದನೆ ಪಡೆದ ನಂತರ ಕ್ರಮವಹಿಸಲು ತೀರ್ಮಾನಿಸಲಾಯಿತು.

**ಉಪ-ಕ್ರಮಾಂಕ (03)**

ಧಾರವಾಡ ಕಟ್ಟೆ, ಧಾರವಾಡ ಹಾಗೂ ಆದಿಕವಿ ಶ್ರೀ ಮಹರ್ಷಿ ವಾಲ್ಮೀಕಿ ವಿಶ್ವವಿದ್ಯಾನಿಲಯ ಮಧ್ಯೆ ಶೈಕ್ಷಣಿಕ ಹಾಗೂ ಸಂಶೋಧನಾ ಚಟುವಟಿಕೆಗಳನ್ನು ನಡೆಸುವ ಕುರಿತು.

**ಚರ್ಚೆ:**

ಸದರಿ ವೇದಿಕೆಯ ಜೊತೆಗೆ ಇತರೆ ಸಂಸ್ಥೆಗಳಾದ ಕರ್ನಾಟಕ ರಾಜ್ಯ ಪತ್ರಾಗಾರ ಇಲಾಖೆ, ಹೆಚ್‌ಸಿಹೆಚ್‌ಆರ್, ಕರ್ನಾಟಕ ಕಾನೂನು ಮತ್ತು ಸಂಸದೀಯ ಸುಧಾರಣಾ ಸಂಸ್ಥೆ, ಕರ್ನಾಟಕ ಸೌಹಾರ್ದ ಫೆಡರೇಶನ್ ಈ ಸಂಸ್ಥೆಗಳೊಂದಿಗೆ ಒಡಂಬಡಿಕೆ ಮಾಡಿಕೊಳ್ಳುವಂತೆ ಹಾಗೂ ವಿಶ್ವವಿದ್ಯಾನಿಲಯದಲ್ಲಿ ಜರುಗುವ ಶೈಕ್ಷಣಿಕ ಹಾಗೂ ಇತರೆ ಕಾರ್ಯಕ್ರಮಗಳಿಗೆ ಸಿಂಡಿಕೇಟ್ ಸದಸ್ಯರನ್ನು ಆಹ್ವಾನಿಸಲು ಮತ್ತು ಅವರ ಹೆಸರನ್ನು ಕಾರ್ಯಕ್ರಮದ ಆಮಂತ್ರಣ ಪತ್ರಿಕೆಯಲ್ಲಿ ಸೇರಿಸುವಂತೆ ಸಿಂಡಿಕೇಟ್ ಸದಸ್ಯರಾದ ಡಾ. ಮೀನಾಕ್ಷಿ ಖಂಡಿಮಠ ಸಭೆಗೆ ತಿಳಿಸಿದರು. ಇದಕ್ಕೆ ಸಂಬಂಧಿಸದಿಂತೆ ಕುಲಸಚಿವರು ಮುಂದಿನ ದಿನಗಳಲ್ಲಿ ಕ್ರಮ ಕೈಗೊಳ್ಳಲಾಗುವುದು ಎಂದು ತಿಳಿಸಿದರು.

**ನಿರ್ಣಯ:**

ಧಾರವಾಡ ಕಟ್ಟೆ, ಧಾರವಾಡ ಹಾಗೂ ಆದಿಕವಿ ಶ್ರೀ ಮಹರ್ಷಿ ವಾಲ್ಮೀಕಿ ವಿಶ್ವವಿದ್ಯಾನಿಲಯ ಮಧ್ಯೆ ಶೈಕ್ಷಣಿಕ ಹಾಗೂ ಸಂಶೋಧನಾ ಚಟುವಟಿಕೆಗಳನ್ನು ವಿಶ್ವವಿದ್ಯಾನಿಲಯಕ್ಕೆ ಯಾವುದೇ ಹಣಕಾಸಿನ ಹೊರೆಯಾಗದಂತೆ ನಿಯಮಗಳನ್ನು ರೂಪಿಸಿಕೊಂಡು ಒಡಂಬಡಿಕೆ ಮಾಡಿಕೊಳ್ಳಲು ಸಿಂಡಿಕೇಟ್ ಸಭೆಯು ಅನುಮೋದಿಸಲಾಯಿತು.

**ಉಪ-ಕ್ರಮಾಂಕ (04)**

ಡಾನ್ ಬಾಸ್ಕೋ ಪದವಿ ಕಾಲೇಜಿನ NOC ಗಾಗಿ ಅನುಮತಿಯನ್ನು ಕೋರಿದ ಪತ್ರದ ಕುರಿತು.

**ನಿರ್ಣಯ**

ಚರ್ಚೆಯ ನಂತರ ವಿಷಯವನ್ನು ಕೈಬಿಡಲಾಯಿತು.

**ಉಪ-ಕ್ರಮಾಂಕ (05)**

ಡಿ.ಆರ್.ಚಿನ್ನ ಸಿಂಡಿಕೇಟ್ ಸದಸ್ಯರ ಪತ್ರಗಳ ವಿಷಯ ಕುರಿತು.

**ನಿರ್ಣಯ: ಚರ್ಚಿಸಲಾಯಿತು.**

**ಉಪ–ಕ್ರಮಾಂಕ (06)**

ಶ್ರೇಯಾಂಕ್ ಎಚ್.ವ್ಹಿ ಸಿಂಡಿಕೇಟ್ ಸದಸ್ಯರ ಇ–ಮೇಲ್ ಪತ್ರ ದಿನಾಂಕ 12.03.2026 ವಿಷಯ ಕುರಿತು.

**ನಿರ್ಣಯ: ಚರ್ಚಿಸಲಾಯಿತು.**

**ಉಪ–ಕ್ರಮಾಂಕ (07)**

ಡಿಜಿಟಲ್ ಮೌಲ್ಯ ಮಾಪನ ಕುರಿತು.

ಡಿಜಿಟಲ್ ಮೌಲ್ಯಮಾಪನ ಟೆಂಡರ್ ಅವಧಿಯು 2026 ಮಾರ್ಚಗೆ ಮುಗಿದಿದ್ದು. ಸದರಿಯವರ ಟೆಂಡರ್ ಅವಧಿಯನ್ನು ಮುಂದುವರಿಸಲು ಕುಲಸಚಿವರು (ಮೌಲ್ಯಮಾಪನ) ಇವರು ಸಭೆಯ ಮುಂದೆ ವಿಷಯ ಮಂಡಿಸಿದರು.

**ನಿರ್ಣಯ:**

ಸದರಿ ವಿಷಯವನ್ನು ಚರ್ಚಿಸಿದ ಸಭೆಯು ವಿಶ್ವವಿದ್ಯಾನಿಲಯದ ಹಿತ ದೃಷ್ಟಿಯಿಂದ ಹೊಸ ಟೆಂಡರ್ ಕರೆಯಬೇಕು ಅಲ್ಲಿಯವರೆಗೆ ವಿದ್ಯಾರ್ಥಿಗಳ ಫಲಿತಾಂಶಕ್ಕೆ ಯಾವುದೇ ತೊಂದರೆ ಆಗದಂತೆ ಈಗಾಗಲೇ ಇರುವ ಕಂಪನಿಯನ್ನು ಡಿಜಿಟಲ್ ಮೌಲ್ಯಮಾಪನಕ್ಕೆ ಬಳಸಿಕೊಳ್ಳಲು ಸಭೆಯು ಒಪ್ಪಿಗೆ ಸೂಚಿಸಿ ಅನುಮೋದಿಸಿತು.

**ಉಪ–ಕ್ರಮಾಂಕ (08)**

ಸಿಂಡಿಕೇಟ್ ಉಪ–ಸಮಿತಿಗಳನ್ನು ರಚಿಸುವ ಕುರಿತು.

**ಚರ್ಚೆ**

ಸಿಂಡಿಕೇಟ್ ಸದಸ್ಯರು ಸಿಂಡಿಕೇಟ್ ಉಪ–ಸಮಿತಿಯ ರಚನೆ ಬಗ್ಗೆ ಚರ್ಚಿಸಿ ಅಂತಿಮವಾಗಿ ಈ ಕೆಳಕಾಣಿಸಿದ ಉಪ ಸಮಿತಿಗಳನ್ನು ರಚಿಸಲಾಯಿತು.

**1. ಅನುಶಾಸನ ಮತ್ತು ಅದ್ಯಾದೇಶ ಸಮಿತಿ.**

| | | |
|---|---|---|
| 01 | ಡಾ. ಮೀನಾಕ್ಷಿ ಖಂಡಿಮಠ<br>ಸಿಂಡಿಕೇಟ್ ಸದಸ್ಯರು<br>ಆದಿಕವಿ ಶ್ರೀ ಮಹರ್ಷಿ ವಾಲ್ಮೀಕಿ ವಿಶ್ವವಿದ್ಯಾನಿಲಯ, ರಾಯಚೂರು | ಅಧ್ಯಕ್ಷರು |
| 02 | ಶ್ರೀ ಡಿ.ಆರ್. ಚಿನ್ನ<br>ಸಿಂಡಿಕೇಟ್ ಸದಸ್ಯರು<br>ಆದಿಕವಿ ಶ್ರೀ ಮಹರ್ಷಿ ವಾಲ್ಮೀಕಿ ವಿಶ್ವವಿದ್ಯಾನಿಲಯ, ರಾಯಚೂರು | ಸದಸ್ಯರು |
| 03 | ಡಾ. ನಾಗರತ್ನ ಎಂ. ನಾಯ್ಕ್<br>ಸಿಂಡಿಕೇಟ್ ಸದಸ್ಯರು<br>ಆದಿಕವಿ ಶ್ರೀ ಮಹರ್ಷಿ ವಾಲ್ಮೀಕಿ ವಿಶ್ವವಿದ್ಯಾನಿಲಯ, ರಾಯಚೂರು | ಸದಸ್ಯರು |
| 04 | ಪ್ರೊ. ಪಿ.ಭಾಸ್ಕರ<br>ಹಿರಿಯ ಪ್ರಾಧ್ಯಾಪಕರು ಹಾಗೂ ಡೀನರು<br>ಆದಿಕವಿ ಶ್ರೀ ಮಹರ್ಷಿ ವಾಲ್ಮೀಕಿ ವಿಶ್ವವಿದ್ಯಾನಿಲಯ, ರಾಯಚೂರು | ಸದಸ್ಯರು |

| | | |
|---|---|---|
| 05 | ವಿಶೇಷಾಧಿಕಾರಿಗಳು<br>ಶೈಕ್ಷಣಿಕ ವಿಭಾಗ<br>ಆದಿಕವಿ ಶ್ರೀ ಮಹರ್ಷಿ ವಾಲ್ಮೀಕಿ ವಿಶ್ವವಿದ್ಯಾನಿಲಯ, ರಾಯಚೂರು | ಸದಸ್ಯ ಕಾರ್ಯದರ್ಶಿಗಳು |

**2. ಕ್ರಮ ನಿಯಮಾವಳಿಗಳ ಸಮಿತಿ**

| | | |
|---|---|---|
| 01 | ಡಾ. ಮೀನಾಕ್ಷಿ ಖಂಡಿಮಠ<br>ಸಿಂಡಿಕೇಟ್ ಸದಸ್ಯರು<br>ಆದಿಕವಿ ಶ್ರೀ ಮಹರ್ಷಿ ವಾಲ್ಮೀಕಿ ವಿಶ್ವವಿದ್ಯಾನಿಲಯ, ರಾಯಚೂರು | ಅಧ್ಯಕ್ಷರು |
| 02 | ಶ್ರೀ ಡಿ.ಆರ್. ಚಿನ್ನ<br>ಸಿಂಡಿಕೇಟ್ ಸದಸ್ಯರು<br>ಆದಿಕವಿ ಶ್ರೀ ಮಹರ್ಷಿ ವಾಲ್ಮೀಕಿ ವಿಶ್ವವಿದ್ಯಾನಿಲಯ, ರಾಯಚೂರು | ಸದಸ್ಯರು |
| 03 | ಶ್ರೀ ಚಂದ್ರಶೇಖರ ಲಿಂಗದಳ್ಳಿ<br>ಸಿಂಡಿಕೇಟ್ ಸದಸ್ಯರು<br>ಆದಿಕವಿ ಶ್ರೀ ಮಹರ್ಷಿ ವಾಲ್ಮೀಕಿ ವಿಶ್ವವಿದ್ಯಾನಿಲಯ, ರಾಯಚೂರು | ಸದಸ್ಯರು |
| 04 | ಶ್ರೀ ಜೀಶಾನ್ ಅಖಿಲ್ ಸಿದ್ದಿಖಿ<br>ಸಿಂಡಿಕೇಟ್ ಸದಸ್ಯರು<br>ಆದಿಕವಿ ಶ್ರೀ ಮಹರ್ಷಿ ವಾಲ್ಮೀಕಿ ವಿಶ್ವವಿದ್ಯಾನಿಲಯ, ರಾಯಚೂರು | ಸದಸ್ಯರು |
| 05 | ಶ್ರೀ ಶ್ರೇಯಾಂಕ್ ಹೆಚ್. ವ್ಹಿ<br>ಸಿಂಡಿಕೇಟ್ ಸದಸ್ಯರು<br>ಆದಿಕವಿ ಶ್ರೀ ಮಹರ್ಷಿ ವಾಲ್ಮೀಕಿ ವಿಶ್ವವಿದ್ಯಾನಿಲಯ, ರಾಯಚೂರು | ಸದಸ್ಯರು |
| 06 | ಡಾ.ಕೆ.ವೆಂಕಟೇಶ್<br>ಸಹ–ಪ್ರಾಧ್ಯಾಪಕರು ಹಾಗೂ ಡೀನರು<br>ಆದಿಕವಿ ಶ್ರೀ ಮಹರ್ಷಿ ವಾಲ್ಮೀಕಿ ವಿಶ್ವವಿದ್ಯಾನಿಲಯ, ರಾಯಚೂರು | ಸದಸ್ಯರು |
| 07 | ಡಾ. ಲತಾ ಎಂ.ಎಸ್<br>ಸಹ–ಪ್ರಾಧ್ಯಾಪಕರು ಹಾಗೂ ಡೀನರು<br>ಆದಿಕವಿ ಶ್ರೀ ಮಹರ್ಷಿ ವಾಲ್ಮೀಕಿ ವಿಶ್ವವಿದ್ಯಾನಿಲಯ, ರಾಯಚೂರು | ಸದಸ್ಯರು |
| 08 | ವಿಶೇಷಾಧಿಕಾರಿಗಳು<br>ಶೈಕ್ಷಣಿಕ ವಿಭಾಗ<br>ಆದಿಕವಿ ಶ್ರೀ ಮಹರ್ಷಿ ವಾಲ್ಮೀಕಿ ವಿಶ್ವವಿದ್ಯಾನಿಲಯ, ರಾಯಚೂರು | ಸದಸ್ಯ ಕಾರ್ಯದರ್ಶಿಗಳು |

**3. ವಿದ್ಯಾರ್ಥಿಗಳ ಪರೀಕ್ಷಾ ದುರ್ನಡತೆ ಸಮಿತಿ**

| | | |
|---|---|---|
| 01 | ಶ್ರೀ ಜೀಶಾನ್ ಅಖಿಲ್ ಸಿದ್ದಿಖಿ<br>ಸಿಂಡಿಕೇಟ್ ಸದಸ್ಯರು<br>ಆದಿಕವಿ ಶ್ರೀ ಮಹರ್ಷಿ ವಾಲ್ಮೀಕಿ ವಿಶ್ವವಿದ್ಯಾನಿಲಯ, ರಾಯಚೂರು | ಅಧ್ಯಕ್ಷರು |
| 02 | ಶ್ರೀ ಶಿವಣ್ಣ ವಕೀಲರು<br>ಸಿಂಡಿಕೇಟ್ ಸದಸ್ಯರು<br>ಆದಿಕವಿ ಶ್ರೀ ಮಹರ್ಷಿ ವಾಲ್ಮೀಕಿ ವಿಶ್ವವಿದ್ಯಾನಿಲಯ, ರಾಯಚೂರು | ಸದಸ್ಯರು |
| 03 | ಶ್ರೀ ಚಂದ್ರಶೇಖರ ಲಿಂಗದಳ್ಳಿ<br>ಸಿಂಡಿಕೇಟ್ ಸದಸ್ಯರು<br>ಆದಿಕವಿ ಶ್ರೀ ಮಹರ್ಷಿ ವಾಲ್ಮೀಕಿ ವಿಶ್ವವಿದ್ಯಾನಿಲಯ, ರಾಯಚೂರು | ಸದಸ್ಯರು |

| | | |
|---|---|---|
| 04 | ಉಪ-ಕುಲಸಚಿವರು<br>ಪರೀಕ್ಷಾ ವಿಭಾಗ<br>ಆದಿಕವಿ ಶ್ರೀ ಮಹರ್ಷಿ ವಾಲ್ಮೀಕಿ ವಿಶ್ವವಿದ್ಯಾನಿಲಯ, ರಾಯಚೂರು | ಸದಸ್ಯ ಕಾರ್ಯದರ್ಶಿಗಳು |

**4. ಬೃಹತ್ ಖರೀದಿ ಸಮಿತಿ**

| | | |
|---|---|---|
| 01 | ಪ್ರೊ. ಶಿವಾನಂದ ಕೆಳಗಿನಮನಿ<br>ಕುಲಪತಿಗಳು<br>ಆದಿಕವಿ ಶ್ರೀ ಮಹರ್ಷಿ ವಾಲ್ಮೀಕಿ ವಿಶ್ವವಿದ್ಯಾನಿಲಯ, ರಾಯಚೂರು | ಅಧ್ಯಕ್ಷರು |
| 02 | ಶ್ರೀ ಜೀಶಾನ್ ಅಖಿಲ್ ಸಿದ್ದಿಖಿ<br>ಸಿಂಡಿಕೇಟ್ ಸದಸ್ಯರು<br>ಆದಿಕವಿ ಶ್ರೀ ಮಹರ್ಷಿ ವಾಲ್ಮೀಕಿ ವಿಶ್ವವಿದ್ಯಾನಿಲಯ, ರಾಯಚೂರು | ಸದಸ್ಯರು |
| 03 | ಶ್ರೀ ಶಿವಣ್ಣ ವಕೀಲರು<br>ಸಿಂಡಿಕೇಟ್ ಸದಸ್ಯರು<br>ಆದಿಕವಿ ಶ್ರೀ ಮಹರ್ಷಿ ವಾಲ್ಮೀಕಿ ವಿಶ್ವವಿದ್ಯಾನಿಲಯ, ರಾಯಚೂರು | ಸದಸ್ಯರು |
| 04 | ಡಾ. ಮೀನಾಕ್ಷಿ ಖಂಡಿಮಠ<br>ಸಿಂಡಿಕೇಟ್ ಸದಸ್ಯರು<br>ಆದಿಕವಿ ಶ್ರೀ ಮಹರ್ಷಿ ವಾಲ್ಮೀಕಿ ವಿಶ್ವವಿದ್ಯಾನಿಲಯ, ರಾಯಚೂರು | ಸದಸ್ಯರು |
| 05 | ಕುಲಸಚಿವರು (ಮೌಲ್ಯಮಾಪನ)<br>ಆದಿಕವಿ ಶ್ರೀ ಮಹರ್ಷಿ ವಾಲ್ಮೀಕಿ ವಿಶ್ವವಿದ್ಯಾನಿಲಯ, ರಾಯಚೂರು | ಸದಸ್ಯರು |
| 06 | ಹಣಕಾಸು ಅಧಿಕಾರಿಗಳು<br>ಆದಿಕವಿ ಶ್ರೀ ಮಹರ್ಷಿ ವಾಲ್ಮೀಕಿ ವಿಶ್ವವಿದ್ಯಾನಿಲಯ, ರಾಯಚೂರು | ಸದಸ್ಯರು |
| 07 | ಡೀನರು, ವಿಜ್ಞಾನ ವಿಭಾಗ<br>ಆದಿಕವಿ ಶ್ರೀ ಮಹರ್ಷಿ ವಾಲ್ಮೀಕಿ ವಿಶ್ವವಿದ್ಯಾನಿಲಯ, ರಾಯಚೂರು | ಸದಸ್ಯರು |
| 08 | ಕುಲಸಚಿವರು<br>ಆದಿಕವಿ ಶ್ರೀ ಮಹರ್ಷಿ ವಾಲ್ಮೀಕಿ ವಿಶ್ವವಿದ್ಯಾನಿಲಯ, ರಾಯಚೂರು | ಸದಸ್ಯರು |
| 09 | ನಿರ್ದೇಶಕರು<br>ಯೋಜನೆ, ಮೇಲ್ವಿಚಾರಣೆ ಮತ್ತು ಮೌಲ್ಯಮಾಪನ ಮಂಡಳಿ<br>ಆದಿಕವಿ ಶ್ರೀ ಮಹರ್ಷಿ ವಾಲ್ಮೀಕಿ ವಿಶ್ವವಿದ್ಯಾನಿಲಯ, ರಾಯಚೂರು | ಸದಸ್ಯ ಕಾರ್ಯದರ್ಶಿಗಳು |

**5. ಕಟ್ಟಡ ಮತ್ತು ಕಾಮಗಾರಿ ಸಮಿತಿ**

| | | |
|---|---|---|
| 01 | ಪ್ರೊ. ಶಿವಾನಂದ ಕೆಳಗಿನಮನಿ<br>ಕುಲಪತಿಗಳು<br>ಆದಿಕವಿ ಶ್ರೀ ಮಹರ್ಷಿ ವಾಲ್ಮೀಕಿ ವಿಶ್ವವಿದ್ಯಾನಿಲಯ, ರಾಯಚೂರು | ಅಧ್ಯಕ್ಷರು |
| 02 | ಶ್ರೀ ಶ್ರೇಯಾಂಕ್ ಹೆಚ್. ಪ್ಹಿ.<br>ಸಿಂಡಿಕೇಟ್ ಸದಸ್ಯರು<br>ಆದಿಕವಿ ಶ್ರೀ ಮಹರ್ಷಿ ವಾಲ್ಮೀಕಿ ವಿಶ್ವವಿದ್ಯಾನಿಲಯ, ರಾಯಚೂರು | ಸದಸ್ಯರು |
| 03 | ಶ್ರೀ ಶಿವಣ್ಣ ವಕೀಲರು<br>ಸಿಂಡಿಕೇಟ್ ಸದಸ್ಯರು<br>ಆದಿಕವಿ ಶ್ರೀ ಮಹರ್ಷಿ ವಾಲ್ಮೀಕಿ ವಿಶ್ವವಿದ್ಯಾನಿಲಯ, ರಾಯಚೂರು | ಸದಸ್ಯರು |

| | | |
|---|---|---|
| 04 | ಶ್ರೀ ಚಂದ್ರಶೇಖರ ಲಿಂಗದಳ್ಳಿ<br>ಸಿಂಡಿಕೇಟ್ ಸದಸ್ಯರು<br>ಆದಿಕವಿ ಶ್ರೀ ಮಹರ್ಷಿ ವಾಲ್ಮೀಕಿ ವಿಶ್ವವಿದ್ಯಾನಿಲಯ, ರಾಯಚೂರು | ಸದಸ್ಯರು |
| 05 | ಡಾ.ಕೆ.ವೆಂಕಟೇಶ್<br>ಸಹ ಪ್ರಾಧ್ಯಾಪಕರು ಹಾಗೂ ಡೀನರು<br>ಆದಿಕವಿ ಶ್ರೀ ಮಹರ್ಷಿ ವಾಲ್ಮೀಕಿ ವಿಶ್ವವಿದ್ಯಾನಿಲಯ, ರಾಯಚೂರು | ಸದಸ್ಯರು |
| 06 | ಡೀನರು, ವಿಜ್ಞಾನ ವಿಭಾಗ<br>ಆದಿಕವಿ ಶ್ರೀ ಮಹರ್ಷಿ ವಾಲ್ಮೀಕಿ ವಿಶ್ವವಿದ್ಯಾನಿಲಯ, ರಾಯಚೂರು | ಸದಸ್ಯರು |
| 07 | ಕುಲಸಚಿವರು<br>ಆದಿಕವಿ ಶ್ರೀ ಮಹರ್ಷಿ ವಾಲ್ಮೀಕಿ ವಿಶ್ವವಿದ್ಯಾನಿಲಯ, ರಾಯಚೂರು | ಸದಸ್ಯ ಕಾರ್ಯದರ್ಶಿಗಳು |

**6. ಗ್ರಂಥಾಲಯ ಸಲಹಾ ಉಪ-ಸಮಿತಿ**

| | | |
|---|---|---|
| 01 | ಪ್ರೊ. ಶಿವಾನಂದ ಕೆಳಗಿನಮನಿ<br>ಕುಲಪತಿಗಳು<br>ಆದಿಕವಿ ಶ್ರೀ ಮಹರ್ಷಿ ವಾಲ್ಮೀಕಿ ವಿಶ್ವವಿದ್ಯಾನಿಲಯ, ರಾಯಚೂರು | ಅಧ್ಯಕ್ಷರು |
| 02 | ಡಾ. ನಾಗರತ್ನ ಎಂ. ನಾಯ್ಕ್<br>ಸಿಂಡಿಕೇಟ್ ಸದಸ್ಯರು<br>ಆದಿಕವಿ ಶ್ರೀ ಮಹರ್ಷಿ ವಾಲ್ಮೀಕಿ ವಿಶ್ವವಿದ್ಯಾನಿಲಯ, ರಾಯಚೂರು | ಸದಸ್ಯರು |
| 03 | ಶ್ರೀ ಚನ್ನಬಸವ ತಂದೆ ಬಸವರಾಜಪ್ಪ<br>ಸಿಂಡಿಕೇಟ್ ಸದಸ್ಯರು<br>ಆದಿಕವಿ ಶ್ರೀ ಮಹರ್ಷಿ ವಾಲ್ಮೀಕಿ ವಿಶ್ವವಿದ್ಯಾನಿಲಯ, ರಾಯಚೂರು | ಸದಸ್ಯರು |
| 04 | ಡಾ. ಮೀನಾಕ್ಷಿ ಖಂಡಿಮಠ<br>ಸಿಂಡಿಕೇಟ್ ಸದಸ್ಯರು<br>ಆದಿಕವಿ ಶ್ರೀ ಮಹರ್ಷಿ ವಾಲ್ಮೀಕಿ ವಿಶ್ವವಿದ್ಯಾನಿಲಯ, ರಾಯಚೂರು | ಸದಸ್ಯರು |
| 05 | ಪ್ರೊ. ಪಾರ್ವತಿ ಸಿ.ಎಸ್<br>ಹಿರಿಯ ಪ್ರಾಧ್ಯಾಪಕರು ಹಾಗೂ ಡೀನರು<br>ಆದಿಕವಿ ಶ್ರೀ ಮಹರ್ಷಿ ವಾಲ್ಮೀಕಿ ವಿಶ್ವವಿದ್ಯಾನಿಲಯ, ರಾಯಚೂರು | ಸದಸ್ಯರು |
| 06 | ಡಾ. ಸುರೇಶ ಜಂಗೆ<br>ಗ್ರಂಥಪಾಲಕರು<br>ಗುಲಬರ್ಗಾ ವಿಶ್ವವಿದ್ಯಾಲಯ, ಕಲಬುರಗಿ | ಸದಸ್ಯರು |
| 07 | ಗ್ರಂಥಪಾಲಕರು<br>ಆದಿಕವಿ ಶ್ರೀ ಮಹರ್ಷಿ ವಾಲ್ಮೀಕಿ ವಿಶ್ವವಿದ್ಯಾನಿಲಯ, ರಾಯಚೂರು | ಸದಸ್ಯ-ಕಾರ್ಯದರ್ಶಿಗಳು |

**7. ವೈದ್ಯಕೀಯ ಬಿಲ್ಲುಗಳ ಪರಿಶೀಲನಾ ಉಪ-ಸಮಿತಿ**

| | | |
|---|---|---|
| 01 | ಶ್ರೀ ಚಂದ್ರಶೇಖರ ಲಿಂಗದಳ್ಳಿ<br>ಸಿಂಡಿಕೇಟ್ ಸದಸ್ಯರು<br>ಆದಿಕವಿ ಶ್ರೀ ಮಹರ್ಷಿ ವಾಲ್ಮೀಕಿ ವಿಶ್ವವಿದ್ಯಾನಿಲಯ, ರಾಯಚೂರು | ಅಧ್ಯಕ್ಷರು |
| 02 | ಡಾ. ನಾಗರತ್ನ ಎಂ. ನಾಯ್ಕ್<br>ಸಿಂಡಿಕೇಟ್ ಸದಸ್ಯರು<br>ಆದಿಕವಿ ಶ್ರೀ ಮಹರ್ಷಿ ವಾಲ್ಮೀಕಿ ವಿಶ್ವವಿದ್ಯಾನಿಲಯ, ರಾಯಚೂರು | ಸದಸ್ಯರು |

| | | |
|---|---|---|
| 03 | ಪ್ರೊ. ಪಿ.ಭಾಸ್ಕರ್<br>ಹಿರಿಯ ಪ್ರಾಧ್ಯಾಪಕರು ಹಾಗೂ ಡೀನರು<br>ಆದಿಕವಿ ಶ್ರೀ ಮಹರ್ಷಿ ವಾಲ್ಮೀಕಿ ವಿಶ್ವವಿದ್ಯಾನಿಲಯ, ರಾಯಚೂರು | ಸದಸ್ಯರು |
| 04 | ಜಿಲ್ಲಾ ಶಸ್ತ್ರ ಚಿಕಿತ್ಸಕರು<br>ಸಾರ್ವಜನಿಕ ಆಸ್ಪತ್ರೆ<br>ರಾಯಚೂರು | ಸದಸ್ಯರು |
| 05 | ಜಿಲ್ಲಾ ಆರೋಗ್ಯ ಅಧಿಕಾರಿಗಳು<br>ಜಿಲ್ಲಾ ಆರೋಗ್ಯ ಇಲಾಖೆ<br>ರಾಯಚೂರು | ಸದಸ್ಯರು |
| 06 | ವೈದ್ಯಾಧಿಕಾರಿಗಳು (ಎಂಪಾನೆಲ್)<br>ಆದಿಕವಿ ಶ್ರೀ ಮಹರ್ಷಿ ವಾಲ್ಮೀಕಿ ವಿಶ್ವವಿದ್ಯಾನಿಲಯ, ರಾಯಚೂರು | ಸದಸ್ಯರು |
| 07 | ಉಪ-ಕುಲಸಚಿವರು (ಆಡಳಿತ)<br>ಆದಿಕವಿ ಶ್ರೀ ಮಹರ್ಷಿ ವಾಲ್ಮೀಕಿ ವಿಶ್ವವಿದ್ಯಾನಿಲಯ, ರಾಯಚೂರು | ಸದಸ್ಯ ಕಾರ್ಯದರ್ಶಿಗಳು |

**8. ವಿಶ್ವವಿದ್ಯಾಲಯ ಸಿಬ್ಬಂದಿಗಳ ಕುಂದುಕೊರತೆ ನಿರ್ವಾಹಣಾ ಉಪ-ಸಮಿತಿ**

| | | |
|---|---|---|
| 01 | ಶ್ರೀ ಚನ್ನಬಸವ ತಂದೆ ಬಸವರಾಜಪ್ಪ<br>ಸಿಂಡಿಕೇಟ್ ಸದಸ್ಯರು<br>ಆದಿಕವಿ ಶ್ರೀ ಮಹರ್ಷಿ ವಾಲ್ಮೀಕಿ ವಿಶ್ವವಿದ್ಯಾನಿಲಯ, ರಾಯಚೂರು | ಅಧ್ಯಕ್ಷರು |
| 02 | ಡಾ. ನಾಗರತ್ನ ಎಂ. ನಾಯ್ಕ್<br>ಸಿಂಡಿಕೇಟ್ ಸದಸ್ಯರು<br>ಆದಿಕವಿ ಶ್ರೀ ಮಹರ್ಷಿ ವಾಲ್ಮೀಕಿ ವಿಶ್ವವಿದ್ಯಾನಿಲಯ, ರಾಯಚೂರು | ಸದಸ್ಯರು |
| 03 | ಡಾ. ಮೀನಾಕ್ಷಿ ಖಂಡಿಮಠ<br>ಸಿಂಡಿಕೇಟ್ ಸದಸ್ಯರು<br>ಆದಿಕವಿ ಶ್ರೀ ಮಹರ್ಷಿ ವಾಲ್ಮೀಕಿ ವಿಶ್ವವಿದ್ಯಾನಿಲಯ, ರಾಯಚೂರು | ಸದಸ್ಯರು |
| 04 | ಡಾ.ಕೆ.ವೆಂಕಟೇಶ್<br>ಸಹ-ಪ್ರಾಧ್ಯಾಪಕರು ಹಾಗೂ ಡೀನರು<br>ಆದಿಕವಿ ಶ್ರೀ ಮಹರ್ಷಿ ವಾಲ್ಮೀಕಿ ವಿಶ್ವವಿದ್ಯಾನಿಲಯ, ರಾಯಚೂರು | ಸದಸ್ಯರು |
| 05 | ಡಾ. ಸುಯಮೀಂದ್ರ ಕುಲಕರ್ಣಿ<br>ಸಹ-ಪ್ರಾಧ್ಯಾಪಕರು ಹಾಗೂ ಡೀನರು<br>ಆದಿಕವಿ ಶ್ರೀ ಮಹರ್ಷಿ ವಾಲ್ಮೀಕಿ ವಿಶ್ವವಿದ್ಯಾನಿಲಯ, ರಾಯಚೂರು | ಸದಸ್ಯರು |
| 06 | ಉಪ-ಕುಲಸಚಿವರು (ಆಡಳಿತ)<br>ಆದಿಕವಿ ಶ್ರೀ ಮಹರ್ಷಿ ವಾಲ್ಮೀಕಿ ವಿಶ್ವವಿದ್ಯಾನಿಲಯ, ರಾಯಚೂರು | ಸದಸ್ಯ ಕಾರ್ಯದರ್ಶಿಗಳು |

**9. ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡ ವಿದ್ಯಾರ್ಥಿ/ಸಿಬ್ಬಂದಿಗಳ ಕಲ್ಯಾಣ ಉಪ-ಸಮಿತಿ**

| | | |
|---|---|---|
| 01 | ಶ್ರೀ ಡಿ.ಆರ್. ಚಿನ್ನ<br>ಸಿಂಡಿಕೇಟ್ ಸದಸ್ಯರು<br>ಆದಿಕವಿ ಶ್ರೀ ಮಹರ್ಷಿ ವಾಲ್ಮೀಕಿ ವಿಶ್ವವಿದ್ಯಾನಿಲಯ, ರಾಯಚೂರು | ಅಧ್ಯಕ್ಷರು |

| | | |
|---|---|---|
| 02 | ಶ್ರೀ ಚನ್ನಬಸವ ತಂದೆ ಬಸವರಾಜಪ್ಪ<br>ಸಿಂಡಿಕೇಟ್ ಸದಸ್ಯರು<br>ಆದಿಕವಿ ಶ್ರೀ ಮಹರ್ಷಿ ವಾಲ್ಮೀಕಿ ವಿಶ್ವವಿದ್ಯಾನಿಲಯ, ರಾಯಚೂರು | ಸದಸ್ಯರು |
| 03 | ಡಾ. ನಾಗರತ್ನ ಎಂ. ನಾಯ್ಕ್<br>ಸಿಂಡಿಕೇಟ್ ಸದಸ್ಯರು<br>ಆದಿಕವಿ ಶ್ರೀ ಮಹರ್ಷಿ ವಾಲ್ಮೀಕಿ ವಿಶ್ವವಿದ್ಯಾನಿಲಯ, ರಾಯಚೂರು | ಸದಸ್ಯರು |
| 04 | ಉಪ-ಕುಲಸಚಿವರು (ಆಡಳಿತ)<br>ಆದಿಕವಿ ಶ್ರೀ ಮಹರ್ಷಿ ವಾಲ್ಮೀಕಿ ವಿಶ್ವವಿದ್ಯಾನಿಲಯ, ರಾಯಚೂರು | ಸದಸ್ಯ ಕಾರ್ಯದರ್ಶಿಗಳು |

ಕುಲಸಚಿವರು ಮಾನ್ಯ ಕುಲಪತಿಗಳಿಗೆ, ಸಭೆಯಲ್ಲಿ ಉಪಸ್ಥಿತರಿದ್ದ ಎಲ್ಲಾ ಸದಸ್ಯರು ಹಾಗೂ ಅಧಿಕಾರಿಗಳಿಗೆ ವಂದಿಸುತ್ತಾ ಸಭೆಯನ್ನು ಮುಕ್ತಾಯಗೊಳಿಸಿದರು.

**ಡಾ. ಚನ್ನಪ್ಪ ಎ., ಕೆ.ಎ.ಎಸ್**
**ಕುಲಸಚಿವರು**
**ಹಾಗೂ ಸದಸ್ಯ ಕಾರ್ಯದರ್ಶಿಗಳು**
ಕುಲಸಚಿವರು
ಆದಿಕವಿ ಶ್ರೀ ಮಹರ್ಷಿ ವಾಲ್ಮೀಕಿ ವಿಶ್ವವಿದ್ಯಾನಿಲಯ
ರಾಯಚೂರು

**ಪ್ರೊ. ಶಿವಾನಂದ ಕೆಳಗಿನಮನಿ**
**ಕುಲಪತಿಗಳು**
**ಹಾಗೂ ಸಿಂಡಿಕೇಟ್ ಸಭೆಯ ಅಧ್ಯಕ್ಷರು**
ಕುಲಪತಿಗಳು
ಆದಿಕವಿ ಶ್ರೀ ಮಹರ್ಷಿ ವಾಲ್ಮೀಕಿ ವಿಶ್ವವಿದ್ಯಾನಿಲಯ
ರಾಯಚೂರು